ಆ) 102.

ಇ) ಹತ್ತು ಲಕ್ಷ ರೂ.ಗಳು.

ಈ) ಹೌದು, ಬೆಂಗಳೂರು, ಮೈಸೂರು, ಬೆಳಗಾಂ ಮತ್ತು ಗುಲ್ಬರ್ಗಾದಲ್ಲಿ;

ಉ) ಉದ್ಭವಿಸುವುದಿಲ್ಲ.

ಬೆಂಗಳೂರಿನಲ್ಲಿರುವ ಚಿತ್ರಕಲಾ ಪರಿಷತ್ತನ್ನು ಡೀಮ್ಡ್ ಯೂನಿವರ್ಸಿಟಿ ಎಂದು ಘೋಷಿಸುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1129(166)

ಸದಸ್ಯರ ಹೆಸರು: ಶ್ರಿ ಕಟ್ಟಾ ಸುಬ್ರಮಣ್ಯ ನಾಯ್ಡು(ಶಿವಾಜಿನಗರ)

ಉತ್ತರಿಸುವ ಸಚಿವರು: ಡಾ॥ಜಿ.ಪರಮೇಶ್ವರ(ಉನ್ನತ ಶಿಕ್ಷಣ ಸಚಿವರು)

ಪ್ರಶ್ನೆ

ಅ) ಬೆಂಗಳೂರಿನಲ್ಲಿರುವ ಚಿತ್ರಕಲಾ ಪರಿಷತ್ತನ್ನು ಡೀಮ್ಡ್ ಯೂನಿವರ್ಸಿಟಿ ಎಂದು ಪರಿಗಣಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?

ಆ) ಹಾಗಿದ್ದಲ್ಲಿ ಡೀಮ್ಡ್ ಯೂನಿವರ್ಸಿಟಿ ಎಂದು ಪರಿಗಣಿಸಲು ಮಾನದಂಡವೇನು?

ಇ) ರಾಜ್ಯದಲ್ಲಿ ಇತರ ಶಿಕ್ಷಣ ಸಂಸ್ಥೆಗಳು ಹಲವಾರು ಶಾಲಾ ಕಾಲೇಜುಗಳನ್ನು ನಡೆಸುತ್ತಿದ್ದು, ಡೀಮ್ಡ್ ಯೂನಿವರ್ಸಿಟಿ ಎಂದು ಘೋಷಿಸಬೇಕೆಂದು ಸರ್ಕಾರಕ್ಕೆ ಮನವಿ ಸಲ್ಲಿಸಿದೆಯೇ?

ಈ) ಹಾಗಿದ್ದಲ್ಲಿ; ಅವುಗಳ ವಿವರ ನೀಡುವುದು?

ಉ) ಡೀಮ್ಡ್ ಯೂನಿವರ್ಸಿಟಿ ಎಂದು ಕೇಂದ್ರ ಸರ್ಕಾರ ಆದೇಶ ನೀಡಬೇಕಾಗಿದೆ ಎಂಬುದು ನಿಜವಲ್ಲವೇ?

ಊ) ಹಾಗಿದ್ದಲ್ಲಿ, ಯಾವ-ಯಾವ ಶಿಕ್ಷಣ ಸಂಸ್ಥೆ : ಕಾಲೇಜುಗಳನ್ನು ಡೀಮ್ಡ್ ಯೂನಿವರ್ಸಿಟಿ ಎಂದು ಘೋಷಿಸಬೇಕೆಂದು ರಾಜ್ಯ ಸರ್ಕಾರ ಕೇಂದ್ರಕ್ಕೆ ಶಿಫಾರಸ್ಸು ಮಾಡಿದೆ?

ಉತ್ತರ

ಅ) ಹೌದು.

ಆ) ಯು.ಜಿಸಿ.ಯ ಸೂತ್ರಗಳನ್ನು ಮತ್ತು ಮಾರ್ಗಸೂಚಿಗಳನ್ನು ಪೂರೈಸುವುದು.

ಇ) ಹೌದು.

ಈ) (1) ಕರ್ನಾಟಕ ಚಿತ್ರಕಲಾ ಪರಿಷತ್, ಬೆಂಗಳೂರು.

(2) ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ ಟ್ರಸ್ಟ್, ಬೆಂಗಳೂರು.

(3) ಜೆ.ಎಸ್.ಎಸ್. ಮಹಾವಿದ್ಯಾಪೀಠ, ಮೈಸೂರು.

(4) ಡಾ.ಯು.ಕೃಷ್ಣಾ ಮುನಿಯಾಲ್ ಮೆಮೋರಿಯಲ್ ಟ್ರಸ್ಟ್, ಉಡುಪಿ.

(5) ವೆಂಕಟೇಶ್ವರ ಎಜುಕೇಷನ್ ಸೊಸೈಟಿ, ಬೆಂಗಳೂರು.

(6) ಸಿದ್ದಾರ್ಥ ಎಜುಕೇಷನ್ ಸೊಸೈಟಿ, ತುಮಕೂರು.

(7) ಕರ್ನಾಟಕ ಲಿಂಗಾಯತ್ ಎಜುಕೇಷನ್ ಸೊಸೈಟಿ, ಬೆಳಗಾಂ.

(8) ಕರ್ನಾಟಕ ರೀಜನಲ್ ಇಂಜಿನೀಯರಿಂಗ್ ಕಾಲೇಜು, ಸುರತ್ಕಲ್.

ಉ) ಹೌದು.

ಊ) (1) ಕೆ.ಆರ್.ಇ.ಸಿ. ಸುರತ್ಕಲ್

(2) ಚಿತ್ರಕಲಾ ಪರಿಷತ್ತು, ಬೆಂಗಳೂರು.

ಶಾಲೆಗಳಲ್ಲಿ ಮಧ್ಯಾಹ್ನ ಉಪಹಾರ ಯೋಜನೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1130(167)

ಸದಸ್ಯರ ಹೆಸರು: ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು(ಶಿವಾಜಿನಗರ)

ಉತ್ತರಿಸುವ ಸಚಿವರು: ಶ್ರೀ ಹೆಚ್.ವಿಶ್ವನಾಥ್(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು)